ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಗುರುವಾರ, ದಿನಾಂಕ : 24 ನೇ ಸೆಪ್ಟೆಂಬರ್, 2020

ಭಾರತೀಯ ರಿಸರ್ವ್ ಬ್ಯಾಂಕಿನಿಂದ ಪಡೆದ ಸಾಲದ ಬಗ್ಗೆ

ಶ್ರೀ ಎನ್. ಅಪ್ಪಾಜಿಗೌಡ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –

427 (632) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಆಗಸ್ಟ್-2019 ರಿಂದ ಇಲ್ಲಿಯವರೆಗೆ ರಾಜ್ಯ ಸರ್ಕಾರ ಭಾರತೀಯ ರಿಸರ್ವ್ ಬ್ಯಾಂಕ್‌ನಿಂದ ಎಷ್ಟು ಸಾಲ ಪಡೆಯ-ಲಾಗಿದೆಯೇ; (ವಿವರ ನೀಡುವುದು)

(ಆ) ಪಡೆದಂತಹ ಸಾಲವನ್ನು ಯಾವ ಯಾವ ಉದ್ದೇಶಕ್ಕಾಗಿ ಬಳಸಲಾಗಿದೆ; (ವಿವರವಾದ ಮಾಹಿತಿ ನೀಡುವುದು) ಸದರಿ ಉದ್ದೇಶಕ್ಕೆ ಕಳೆದ ಸಾಲಿನ ಬಜೆಟ್‌ನಲ್ಲಿ ಎಷ್ಟು ಮೊತ್ತವನ್ನು ನಿಗದಿಪಡಿಸಲಾಗಿತ್ತು; ಪ್ರಸ್ತುತ ಹೆಚ್ಚುವರಿ ಎಷ್ಟು ಮೊತ್ತವನ್ನು ಖರ್ಚು ಮಾಡಲಾಗಿದೆ;

(ಇ) ರಾಜ್ಯ ಸರ್ಕಾರ ಇತರೆ ಬ್ಯಾಂಕ್‌ಗಳಿಂದ ಸಾಲ ಪಡೆದ ವಿವರವನ್ನು ನೀಡುವುದು ಕೋವಿಡ್-2019 ಸಂಬಂಧ ಇಲ್ಲಿಯವರೆಗೆ ವೈದ್ಯಕೀಯ ಉಪಕರಣ, ಚಿಕಿತ್ಸೆ ಸಂಶೋಧನೆ, ಪಿ.ಪಿ.ಇ ಕಿಟ್ ವೆಂಟಿಲೇಟರ್, ಇತರೆ ಮೂಲ ಸೌಲಭ್ಯಕ್ಕೆ ಹಾಗೂ ಆಸ್ಪತ್ರೆ ಮೇಲ್ದರ್ಜೆ ಮಾಡಲು ಭರಿಸುವ ಮೊತ್ತವನ್ನು ಪ್ರತ್ಯೇಕವಾಗಿ ನೀಡುವುದು;

(ಈ) ಮಂಡ್ಯ ಜಿಲ್ಲೆಯಲ್ಲಿ ಕೋವಿಡ್-2019 ಸಂಬಂಧ ಇಲ್ಲಿಯವರೆಗೆ ವೈದ್ಯಕೀಯ ಉಪಕರಣ, ಚಿಕಿತ್ಸೆ ಸಂಶೋಧನೆ, ಪಿ.ಪಿ.ಇ ಕಿಟ್, ವೆಂಟಿಲೇಟರ್, ಇತರೆ ಮೂಲ ಸೌಲಭ್ಯಕ್ಕೆ ಹಾಗೂ ಆಸ್ಪತ್ರೆ ಮೇಲ್ದರ್ಜೆ ಮಾಡಲು ಭರಿಸುವ ಮೊತ್ತವೆಷ್ಟು? (ತಾಲ್ಲೂಕುವಾರು ಪ್ರತ್ಯೇಕವಾಗಿ ವಿವರ ನೀಡುವುದು)